## ಗುಂಡನ ಗೊಂದಲ

‘ಯಾಕೆ ಗುಂಡ? ಕನ್‌ಫ್ಯೂಸ್ ಆಗಿದ್ದೀಯಾ. ಏನಾಯ್ತು? ನಿನ್ನೆ ನಿನ್ನ ರಿಪೋರ್ಟ್ ಕಾರ್ಡು ಅಪ್ಪ, ಅಮ್ಮಂಗೆ ತೋರಿಸಿದ್ಯಾ, ಸೈನ್ ಮಾಡ್ಸಿದೀಯಾ?’ ಅಂತ ಮೇಷ್ಟ್ರು ಕೇಳಿದರು.

‘ಇಲ್ಲ ಸಾರ್, ನಾನು ಆ ದೇವ್ರನ್ನು ಕೇಳಿದೆ... ನನ್ನ ರಿಪೋರ್ಟ್ ಕಾರ್ಡು ಸ್ಥಿತಿ ಐಸಿಯು ಸ್ಥಿತಿಯಲ್ಲಿದೆ ಏನ್ಮಾಡೋದು ಅಂತ. ಪಾಪ, ಆ ದೇವ್ರು ಸಂದಿಗ್ಧಕ್ಕೆ ಸಿಲುಕಿ... ಏನ್ಮಾಡೋದೋ ಗುಂಡಾ, ನಂಗೂ ಕನ್‌ಫ್ಯೂಸ್ ಆಗಿದೆ. ನಿನ್ನ ರಿಪೋರ್ಟ್ ಕಾರ್ಡಿನ ಐಸಿಯು ಸ್ಥಿತಿಯನ್ನು ನಾನು ನೋಡಬಲ್ಲೆ, ಆದರೆ, ಈ ಸ್ಥಿತಿ ಅಪ್ಪ– ಅಮ್ಮಂಗೆ ಗೊತ್ತಾದ್ರೆ ನೀನು ನಿಜವಾಗಲೂ ಅದೇ ಸ್ಟೇಜ್‌ಗೆ ಹೋಗ್ಬಿಡ್ತೀಯೇನೊ ಅಂತ ನಂಗೂ ಸಂದಿಗ್ಧತೆ ಕಣೋ’ ಅಂತಂದ ಸಾರ್ ದೇವ್ರು.



ಅದಕ್ಕೇ ನಂಗೂ ಸ್ವಲ್ಪ ಕನ್‌ಫ್ಯೂಸ್ ಅಂದಾಗ ಎಲ್ರೂ ಚೆನ್ನಾಗಿ ನಕ್ಕರು. ಗುಂಡ ನಗಲಿಲ್ಲ.

**ಸುಮನಾ**

---

## ಜ್ಞಾನೋದಯ!

ಒಂದು ಭಾನುವಾರ ಗುಂಡನ ಪತ್ನಿ ಕೇಳಿದಳು, ‘ರೀ, ಒಂದು ವೇಳೆ ಎರಡು–ಮೂರು ದಿನ ನಿಮಗೆ ನಾನು ಕಾಣಿಸಿಕೊಳ್ಳದಿದ್ದರೆ ನಿಮಗೇನನ್ನಿಸುತ್ತದೆ?’

ಮನೆಯಲ್ಲಿ ಪತ್ನಿಯ ಗೈರು ಹಾಜರಿಯನ್ನು ನೆನೆಸಿಕೊಂಡೇ ಆನಂದ ತುಂದಿಲನಾಗಿ ಗುಂಡ ಅದೇ ಭಾವ ಪರವಶತೆಯಲ್ಲಿ ಉತ್ತರಿಸಿದ, ‘ನನಗೆ ತುಂಬಾ ಖುಷಿಯಾಗುತ್ತದೆ’.

ಆ ಬಳಿಕ, ಸೋಮವಾರ ಆತನಿಗೆ ಪತ್ನಿ ಕಾಣಿಸಲಿಲ್ಲ. ಮರುದಿನ ಅಂದರೆ ಮಂಗಳವಾರ ಕಾಣಿಸಲಿಲ್ಲ. ಬುಧವಾರವೂ ಆಕೆ ಕಾಣಿಸಲಿಲ್ಲ. ಗುರುವಾರದ ದಿನ ಯಾವಾಗ ಆತನ ಕಣ್ಣುಗಳ ಬಾವು ಕೊಂಚ ಕಡಿಮೆಯಾಯಿತೋ ಆವಾಗ ಸ್ವಲ್ಪಸ್ವಲ್ಪವೇ



ಕಾಣಿಸಲಾರಂಭಿಸಿದಳು! ಅಂದಿನಿಂದ ಪತ್ನಿಯ ಯಾವುದೇ ಪ್ರಶ್ನೆಗೆ ಉತ್ತರಿಸುವ ಮುನ್ನ ಎರಡೆರಡು ಬಾರಿ ಯೋಚಿಸುವಷ್ಟು ಪ್ರಜ್ಞಾವಂತನಾದ ಗುಂಡ!

**ರಮಣ್ ಶೆಟ್ಟಿ ರೆಂಜಾಳ**